**ಸಾಕ್ಷಿಯನ್ನು ದಿಃ 26.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ಟಿ ನರಸೀಪುರ ತಾಲ್ಲೂಕಿನ ಕೋಳಿಮಲ್ಲನ ಹುಂಡಿ ಗ್ರಾಮದಲ್ಲಿ ವಾಸಿಸುತ್ತನೆ. ತ2 ವರ್ಷದ ಹಿಂದೆ ಅಪಘಾತವಾಗಿದೆ. ಟಿ ನರಸೀಪುರರಿದಿಂದ ತಲಕಾಡು ಕಡೆ ಹೋಗುತ್ತಿದ್ದಾಗ ಚೌಹಳ್ಳಿ ಗ್ರಾಮದಿ ಬಳಿ ಅಘಾತವಾಯಿತು. ನನ್ನ ಮಗ ಬೈಕ ಚಲಾಯಿಸುತ್ತಿದ್ದು ನಾನು ಹಿಂದೆ ಕೂತಿದ್ದೆ. ಬೈಕ್ ನಂಬರ ಗೊತ್ತಿಲ್ಲ. ನನ್ನ ಹಿರಿಯ ಮಗ ಪ್ರೇಮಕುಮಾರ ಬೈಕ್ ಚಲಾಯಿತ್ತಿದ್ದ. ಬೈಕ್ ಅವನ ಹೆಸರಲ್ಲೆ ಇದೆ. ಅದಕ್ಕೆ ವಿವೆ ಇತ್ತು. ಅವನಿಗೆ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನಮಗೆ ಒಮಿನಿ ವಾಹನ ಡಿಕ್ಕಿ ಪಡಿಸಿತು. ಅದರ ನಂಬರ್ ಹೇಳಲಾಗುವುನದಿಲ್ಲ. ಅದರ ಚಾಲಕನ ಹಾಗೂ ಆತನ ಹೆಸರು ಗೊತ್ತಿಲ್ಲ. ಅವರು ಎಷ್ಟು ದೂರದಿಂದ ಬರುತ್ತಿದ್ದರಂದು ಗಮನಿಸಿಲ್ಲ. ನನ್ನ ಮಗನೇ ಅವನ ತಪ್ಪಿನಿಂದ ನನ್ನು ಬಚಿಳಿಸಿದ್ದು ಅವನ ಬೈಕಗೆ ವಿಮೆ ಇಲ್ಲ ದ ಕಾರಣ ಪರಿಹಾರಕ್ಕಾಗಿ ಎದುರುದಾರರ ವಾಹನದ ಮೇಲೆ ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ಪೋಲಿಸರಿಗೆ 2 ದಿನ ಬಿಟ್ಟು ದೂರು ನೀಡಿದ್ದಾನೆ. ನಾನು ಆಸ್ಪತ್ರೆಯಲ್ಲಿ ಇದ್ದೆ. ಮೊದಲು ಟಿ ನರಸೀಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆನಿರುತ್ತೇನೆ. ನಂತರ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಬಂದಿರುತ್ತೇನೆ. 3 ದಿನ ಒಳರೋಗಿಯಾಗಿದ್ದೆ. ಅಪಘಾತದಿಂದ ನನ್ನ ತಲೆಗೆ ಪೆಟ್ಟಾಗಿತ್ತು. ರಾಜೇಶ ಎಂಬ ವೈಧ್ಯರು ಚಿಕಿತ್ತೆ ಮಾಡಿದ್ದಾರೆ. ಶಸ್ತ್ರ ಚಿಕಿತ್ಸೆ ಮಾಡಿಲ್ಲ. ವರದಿಯಲ್ಲಿ ಮೈಲ್ಡ್ ಇಂಜೂರಿ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಬೇರೆ ಯಾವುದೇ ಪೆಟ್ಟು ಆಗಿಲ್ಲ. ಬಿಡುಗಡೆಯಾದ ನಂತರ ಆಗಾಗ್ಗೆ ಆಸ್ಪತ್ರೆಗೆ ತೋರಿಸುತ್ತಿದ್ದೇನೆ. 1 ತಿಂಗಳ ಹಿಂದೆ ಆಸ್ಪತ್ರೆಗೆ ಹೋಗಿದ್ದೇನೆ. ಈ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕೆ ಆರ್ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡಿದ್ದಾರೆ ಎಂದರೆ ಸರಿಯಲ್ಲ. ಅಪಘಾತವಾದಾಗ ನನಗೆ 46 ವರ್ಷ. ಈ ಬಗ್ಗೆ ನಾನು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನಗೆ

50 ವರ್ಷ ಎಂದರೆ ಸರಿಯಲ್ಲ. ಈ ಯಾವುದೇ ಕೆಲಸ ಮಾಡುತ್ತಿಲ್ಲ, ಮೊದಲು ಕೂಲಿ ಕೆಲಸ ಮಾಡುತ್ತಿದ್ದೆ. ನನ್ನ ಉದ್ಯೋಗ ಮತ್ತು ಆದಾಯದ ಬಗ್ಗೆ ಸುಳುಳ ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಯಜಮಾನರು ನಮ್ಮನ್ನು ನೋಡಿಕೊಳ್ಳುತಿದ್ದು ನಾನು ಯಾವುದೇ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಪರಿಹಾರಿಕ್ಕಾಗಿ ಬಿಲ್ಲುಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ, ಈಗ ಮೊದಲಿನಂತೆಯೇ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾಗ ಎಕಾಎಕಿ ಬಲ ಭಾಗಕ್ಕೆ ಬೈಕು ತಿರುಗಿಸಿದ ಕಾರಣ ಸ್ಕಿಡ್ ಆಗಿ ಬಿದ್ದಿದ್ದಾನೆ  ಎಂದರೆ ಸರಿಯಲ್ಲ. ಕಾರಿನವರುದು ಯಾವುದೇ ತಪ್ಪಿಲ್ಲ ಎಂದರೆ ಸರಿಯಲ್ಲ. ಆದಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.